O.S. 41/2023

PW-2

**Witness duly sworn on 19.09.2025.**

**Examination in chief by Smt. GDK Advocate:**

I have filed my affidavit in lieu of examination in chief. I have personally instructed my counsel in preparing the affidavit. Hence I am duly acquainted with the contents of the affidavit.

**ಪಾಟೀ ಸವಾಲುಃ ಶ್ರೀ ಬಿ.ಪಿ.ಪಿ 1 ರಿಂದ 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ, ಆದರೆ ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯು ಬಸವನ್ನೆಪ್ಪ ಕಟ್ಟಿಮಣಿ ಮತ್ತು ರಾಜಪ್ಪ ಬೇವಿನಮರದ ಇವರ ಮಧ್ಯ ನಡೆದಿದೆ. ಮನೆಗೆ ಸಂಬಂಧಿಸಿದಂತೆ ಈ ವ್ಯಾಜ್ಯ ನಡೆದಿದೆ. ಸದರಿ ಮನೆಯ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆ ಪೂರ್ವ ಪಶ್ಚಿಮವಾಗಿ 200 ಫೂಟ್ ಇದ್ದು, ಉತ್ತರ ದಕ್ಷೀಣವಾಗಿ 60 ಫೂಟ್ ಇದೆ. ಅವರವರ ನಡುವೆ ಜಗಳ ನಡೆದಾಗ , ನಾನು ಅಲ್ಲಿ ಇದ್ದೆ. ಜಗಳ ನಡೆದು ಸುಮಾರು 2 ವರ್ಷಗಳ ಮೇಲೆ ಆಗಿದೆ, ದಿನಾಂಕ ನಿಖರವಾಗಿ ಹೇಳಲು ಬರುವುದಿಲ್ಲ.

ಅಳತೆ ಮಾಡಿದ ಜಾಗದ ಚೆಕ್ ಬಂದಿಯು ಪೂರ್ವಕ್ಕೆ ಪಂಚಾಯತ್ ರಸ್ತೆ ಇದ್ದು, ಪಶ್ಚಿಮಕ್ಕೆ ರಾಜಪ್ಪರವರ ಮನೆ, ಉತ್ತರಕ್ಕೆ ಕಲ್ಲಪ್ಪ ಬಂಡಿವಡ್ಡರವರ ಮನೆ ಮತ್ತು ದಕ್ಷೀಣಕ್ಕೆ ರುದ್ರಪ್ಪ ಅಂಗಡಿರವರು ಇದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಆಸ್ತಿಯ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಅವರವರ ಮಧ್ಯ ಜಗಳವಾಯಿತೆಂದು ಹೇಳಿದ್ದು, ಸದರಿ ದಿನದಂದು ಏನಾಯಿತು ಎಂದರೆ, ಮನೆ ಜಾಗ ನಮ್ಮದು ಅದನ್ನು ನಮಗೆ ಬಿಟ್ಟುಕೊಡಿ ಎಂದು 1 ನೇ ಪ್ರತಿವಾದಿ ಹೇಳಿದ್ದು, ಅದಕ್ಕೆ ವಾದಿಯು ನಾವು ಸುಮಾರು ವರ್ಷಗಳಿಂದ ಅಲ್ಲಿದ್ದೇವೆ, ಅದು ನಮ್ಮದೇ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಇಷ್ಟೇ ನಡೆಯಿತು, ಅವರು ವ್ಯವಹಾರ ಮಾಡಿಕೊಳ್ಳದೇ ಇರುವ ಕಾರಣ, ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ತಿಳಿಸಿದೇವು.

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಯು ವಾದಿಯ ಮನೆಗೆ ಕೆಲವು ಜನರನ್ನು ಕರೆದುಕೊಂಡು ಬಂದು ಅಕ್ರಮ ರೀತಿಯ ಪ್ರವೇಶ ಮಾಡಿ, ವಾದಿಯನ್ನು ಆ ಆಸ್ತಿಯಿಂದ ಕಬ್ಜಾ ತಪ್ಪಿಸಲು ಪ್ರಯತ್ನ ಎಸಗಿದಲ್ಲದೇ ಆಸ್ತಿಯ ಗಡಿಗುಂಟ ಇರುವ ಬೇಲಿಯನ್ನು ನಾಶಪಡಿಸಿರುತ್ತಾರೆಂದು

ಹೇಳಿ ಬರೆಸಿರುತ್ತೇನೆ. ಬೇಲಿಯನ್ನು ಉತ್ತರ ದಕ್ಷಿಣವಾಗಿ ಮತ್ತು ಪೂರ್ವ ಪಶ್ಚಿಮವಾಗಿ ಎಷ್ಟು ನಾಶಪಡಿಸಿರುತ್ತಾರೆ ಎಂದರೆ, ಅತು ತಂತಿಯ ಬೇಲಿಯಲ್ಲ, ಬಂಬೂ ಬೇಲಿ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು, ಅವರ ಹಿತ್ತಲಿನಲ್ಲಿದ್ದ ಬೇಲಿಯನ್ನು ನಾಶಪಡಿಸಿರುತ್ತಾರೆ. ಉದ್ದಕ್ಕೆ ಸುಮಾರು 50 ಫೂಟ್ ಮತ್ತು ಅಗಲಕ್ಕೆ ಸುಮಾರು 30 ಫೂಟ್ ಬೇಲಿಯನ್ನು ನಾಶಪಡಿಸಿರುತ್ತಾರೆ. ಹೀಗೆ ಬೇಲಿ ತೆಗೆದ ಜಾಗದ ಕಬ್ಜಾವನ್ನು 1 ನೇ ಪ್ರತಿವಾದಿ ತೆಗೆದುಕೊಳ್ಳುತೇನೆಂದು ಹೇಳಿದ್ದು, ಆದರೆ ತೆಗೆದುಕೊಂಡಿದ್ದು ಇರುವುದಿಲ್ಲ. ನಾನು ಹೇಳುವಂತಹ ವಾದಿಯ ಆಸ್ತಿ ಅಸ್ತಿತ್ವದಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಒಳ್ಳೆಯ ಸಂಬಂಧ ಇದೆ ಎಂದರೆ, ಸಂಬಂಧ ಏನು ಇಲ್ಲ ನಮಗೆ ಬೇಕಾದವರು ಎಂದು ನುಡಿಯುತ್ತಾರೆ. ನನಗೆ ಸಂಬಂಧಿಸಿದ 3 ಎಕರೆ ಜಮೀನು ಇದೆ. ನಮ್ಮ ಜಮೀನಿನ ಖಾತೆ ನಂಬರ್ 250 ಆಗಿರುತ್ತದೆ. ನನ್ನ ಮತ್ತು ವಾದಿಯ ನಡುವೆ ಒಳ್ಳೆಯ ಸಂಬಂಧ ಇರುವುದರಿಂದ, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**

O.S. 41/2023

PW-3

**Witness duly sworn on 19.09.2025.**

**Examination in chief by Smt. GDK Advocate:**

I have filed my affidavit in lieu of examination in chief. I have personally instructed my counsel in preparing the affidavit. Hence I am duly acquainted with the contents of the affidavit.

**ಪಾಟೀ ಸವಾಲುಃ ಶ್ರೀ ಬಿ.ಪಿ.ಪಿ 1 ರಿಂದ 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯು ಬಸವನ್ನೆಪ್ಪ ಕಟ್ಟಿಮಣಿ ಮತ್ತು ರಾಜಪ್ಪ ಬೇವಿನಮರದ ಇವರ ಮಧ್ಯ ನಡೆದಿದೆ. ಮನೆಗೆ ಸಂಬಂಧಿಸಿದಂತೆ ಈ ವ್ಯಾಜ್ಯ ನಡೆದಿದೆ. ಸದರಿ ಮನೆ ಸಂಖ್ಯೆ 3 ಆಗಿದ್ದು, ಅದು ಬಸಾಪುರ ಗ್ರಾಮದಲ್ಲಿದೆ. ನಾನು ಸದರಿ ಮನೆಯ ಉತಾರವನ್ನು ನೋಡಿದ್ದು ಇರುವುದಿಲ್ಲ. ಸದರಿ ಮನೆಯು 200 ಫೂಟ್ ಉದ್ದ ಇದ್ದು, 60 ಫೂಟ್ ಅಗಲವಿದೆ. ಸದರಿ ಮನೆಯು ವಾದಿಯ ಸಂಬಂಧಿಸಿದ್ದಾಗಿದ್ದು, ಸದರಿ ಮನೆಯಲ್ಲಿ ಅವರೇ ವಾಸವಾಗಿದ್ದಾರೆ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಪೂರ್ವಕ್ಕೆ ಪಿ.ಡಬ್ಲು.ಡಿ ರಸ್ತೆ ಇದ್ದು, ಪಶ್ಚಿಮಕ್ಕೆ ಕಚ್ಚಾ ರಸ್ತೆ ಇದ್ದು, ಉತ್ತರಕ್ಕೆ ಕಲ್ಲಪ್ಪ ಬಂಡಿವಡ್ಡವರ ಮನೆ ಮತ್ತು ದಕ್ಷಿಣಕ್ಕೆ ರುದ್ರಪ್ಪ ಅಂಗಡಿರವರು ಇದ್ದಾರೆ ಎಂದು ನುಡಿಯುತ್ತಾರೆ. ಚೆಕ್ ಬಂದಿಯ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇಲಿ ನಾಶಪಡಿಸಿರುತ್ತಾರೆಂದು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆಯೇ ಎಂದರೆ, ಬೇಲಿಯನ್ನು ಕಿತ್ತುಎಸದಿರುತ್ತಾರೆ ಎಂದು ನುಡಿಯುತ್ತಾರೆ. ದಕ್ಷಿಣ ಕಡೆಯ ಮತ್ತು ಉತ್ತರ ಕಡೆಯ ಬೇಲಿಯನ್ನು ಕಿತ್ತು ಎಸೆದಿರುತ್ತಾರೆ. 10-20 ಫೂಟ್ ಬೇಲಿಯನ್ನು ಕಿತ್ತಿರುತ್ತಾರೆ. ದಕ್ಷಿಣ ಮತ್ತು ಪೂರ್ವದ ಕಡೆಗೆ ಮಾತ್ರ 10 10 ಫೂಟ್ ಕಿತ್ತಿರುತ್ತಾರೆ , ಅಂದರೆ ಎರಡು ಕಡೆಯ ಬೇಲಿಯನ್ನು 10 10 ಫೂಟ್ ಕಿತ್ತಿರುತ್ತಾರೆ ಎಂದು ನುಡಿಯುತ್ತಾರೆ. ಬೇಲಿ ಕಿತ್ತ ನಂತರ, 1 ನೇ ಪ್ರತಿವಾದಿ ಕಬ್ಜಾವನನ್ನೆದಾರೂ ತೆಗೆದುಕೊಂಡರಾ ಎಂದರೆ, ಸಾಕ್ಷಿಯು ಜಗಳವಾದ ನಂತರ, ಅವರವರ ಮನೆ ಕಡೆಗೆ ಹೋದರು. ಬೇಲಿ ಕಿತ್ತ ನಂತರ, ಜಾಗವು ವಾದಿಯ ಬಳಿ ಉಳಿಯಿತು. ಸದರಿ ದಿನದಂದು ಬೇಲಿಯನ್ನು ಕಿತ್ತು ಒಗೆದಿದ್ದು ಇರುವುದಿಲ್ಲ ಮತ್ತು ವಾದಿ ಕಬ್ಜೆಯಲ್ಲಿಯೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತು ವಾದಿಯ ನಡುವೆ ಒಳ್ಳೆಯ ಸಂಬಂಧ ಇದೆ ಎಂದರೆ, ಒಂದೇ ಊರಿನವರಾಗಿರುವುದರಿಂದ, ಅವರ ಜೊತೆ ಮಾತನಾಡುತ್ತೇವೆ ಎಂದು ನುಡಿಯುತ್ತಾರೆ. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಹೀಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**